ನ್ಯಾ||ಸದಾಶಿವ ವರದಿ ಶಿಫಾರಸ್ಸಿಗೆ ರಾಹುಲ್ ಸೂಚನೆ

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ತೀವ್ರ ಖಂಡನೆ

ದಾವಣಗೆರೆ

ಎಐಸಿಸಿ ಅಧ್ಯಕ್ಷ ರಾಹುಲ್‌ಗಾಂಧಿಯವರು, ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಯನ್ನು ತಕ್ಷಣವೇ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸೂಚಿಸಿರುವುದನ್ನು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ತೀವ್ರವಾಗಿ ಖಂಡಿಸಿದೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಘವೇಂದ್ರ ನಾಯ್ಕ, ಎಐಸಿಸಿ ಅಧ್ಯಕ್ಷ ರಾಹುಲ್‌ಗಾಂಧಿಯವರು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಒಂದು ಸಮುದಾಯದವರು ಕಪ್ಪುಬಟ್ಟೆ ಪ್ರದರ್ಶನ ಮಾಡಿದರು ಎಂಬ ಏಕೈಕ ಕಾರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ತಕ್ಷಣವೇ ಸದಾಶಿವ ಆಯೋಗದ ವರದಿಯನ್ನು ಶಿಫಾರಸು ಮಾಡುವಂತೆ ಸೂಚಿಸಿರುವುದರಿಂದ ಭೋವಿ, ಲಂಬಾಣಿ, ಕೊರಚ, ಕೊರಮ ಸೇರಿದಂತೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 99 ಜಾತಿಗಳ ಜನರಿಗೆ ತೀವ್ರ ಆಘಾತವಾಗಿದೆ ಎಂದು ಹೇಳಿದರು.

ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷರು ಪ್ರಬುದ್ಧರಾಗಿ ಆ ವರದಿಯಲ್ಲಿರುವ ಸತ್ಯಾಸತ್ಯತೆ ಮತ್ತು ವಾಸ್ತವ ಅಂಶಗಳನ್ನು ಅರಿತು ಮಾತನಾಡಬೇಕಿತ್ತು. ಆದರೆ, ರಾಹುಲ್ ಗಾಂಧಿಯವರು ಆ ವರದಿಯಲ್ಲಿರುವ ಯಾವ ಅಂಶಗಳ ಬಗ್ಗೆಯೂ ತಿಳಿಯದೇ, ಏಕಾಏಕಿ ಶಿಫಾರಸು ಮಾಡುವಂತೆ ಸಿಎಂಗೆ ಸೂಚನೆ ನೀಡಿರುವುದು ಪರಿಶಿಷ್ಟ ಜಾತಿಯ 99 ಸಮುದಾಯಗಳ ಜನರಲ್ಲಿ ತೀವ್ರ ತಲ್ಲಣ ಮೂಡಿಸಿದೆ. ಮುಖ್ಯಮಂತ್ರಿಗಳು ರಾಹುಲ್ ಸೂಚನೆ ಮೇರೆಗೆ ಕೇಂದ್ರ ಸರ್ಕಾರಕ್ಕೆ ಸದಾಶಿವ ಆಯೋಗದ ವರದಿಯನ್ನು ಶಿಫಾರಸ್ಸು ಮಾಡಿದರೆ, ಚುನಾವಣೆಯ ಸಂದರ್ಭದಲ್ಲಿ 99 ಜಾತಿಗಳ ಜನರು ಕಾಂಗ್ರೆಸ್ ಪಕ್ಷದ ವಿರುದ್ಧ ರಾಜಕೀಯ ನಿಲುವು ತಳೆಯಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಕ್ಷಣವೇ ರಾಹುಲ್‌ಗಾಂಧಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ನೀಡಿರುವ ಸೂಚನೆಯನ್ನು ವಾಪಾಸ್ ಪಡೆದು ಪ್ರಬುದ್ಧತೆ ಮೆರೆಯಬೇಕು. ಮುಖ್ಯಮಂತ್ರಿಗಳು ಆ ವರಿಯಲ್ಲಿ ಏನಿದೆ ಎಂಬುದನ್ನು ಅರಿತು, ಆ ಅಂಶಗಳ ಕುರಿತು ಸತ್ಯಾಸತ್ಯತೆ ಪರಾಮರ್ಶೆ ಮಾಡಲು ಎಲ್ಲ ಸಮುದಾಯದ ಮುಖಂಡರನ್ನು ಕರೆದು ಚರ್ಚಿಸಬೇಕೆಂದು ಒತ್ತಾಯಿಸಿದರು.

ಮುಖ್ಯಮಂತ್ರಿಗಳು, ಸಮಾಜ ಕಲ್ಯಾಣ ಸಚಿವರ ಆದಿಯಾಗಿ ಯಾರಿಗೂ ಸಹ ಸದಾಶಿವ ಆಯೋಗದ ವರದಿಯಲ್ಲಿ ಏನಿದೆ ಎಂಬುದರ ಬಗ್ಗೆ ತಿಳಿದಿಲ್ಲ. ಈ ವರಿಯನ್ನು ಯಾರೂ ಸಹ ಓದಿಯೂ ಇಲ್ಲ. ವಾಸ್ತವ ಪರಿಸ್ಥಿತಿ ಹೀಗಿದ್ದಾಗ ರಾಜ್ಯ ಸರ್ಕಾರ ಏನೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೀರಿ ಎಂದು ಪ್ರಶ್ನಿಸಿದ ಅವರು, ಸುಪ್ರೀಂ ಕೋರ್ಟ್‌ನ 1998ರ ಆದೇಶದ ಪ್ರಕಾರ ಯಾವುದೇ ರಾಜ್ಯ ಸರ್ಕಾರಕ್ಕೆ ಒಳ ಮೀಸಲಾತಿ ಕಲ್ಪಿಸುವ ಅಧಿಕಾರವಿಲ್ಲ. ಅಂಥಹ ಸಂದರ್ಭದಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಅವರು ಒಳ ಮೀಸಲಾತಿಗೆ ಶಿಫಾರಸು ಮಾಡಿರುವುದು ನ್ಯಾಯಾಂಗ ನಿಂದನೆಯಲ್ಲವೇ ಎಂದು ಪ್ರಶ್ನಿಸಿದರು.

ವರದಿಯಲ್ಲಿ ಆರ್ಟಿಕಲ್ 342(2) ಕಲಂ ಬಳಿಸಲಾಗಿದೆ. ಇದರ ಪ್ರಕಾರ ಯಾವುದೇ ಸಮುದಾಯಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಿಂದ ಕೈಬಿಡಬಹುದಾಗಿದೆ. ಸದಾಶಿವ ಆಯೋಗ ಒಳ ಮೀಸಲಾತಿ ಮಾತ್ರ ಕಲ್ಪಿಸಿದ್ದರೆ ವರದಿಯಲ್ಲಿ 342(2) ಕಲಂ ಅನ್ನು ಬಳಸಿರುವುದು ಏಕೆ? ಎಂದು ಪ್ರಶ್ನಿಸಿದ ಅವರು, ಬಾಬಾಸಾಹೇಬ್ ಅಂಬೇಡ್ಕರ್ ಮೀಸಲಾತಿ ಕಲ್ಪಿಸಲು ಸಂವಿಧಾನದಲ್ಲಿ ಎಲ್ಲೂ ಸಹ ಸ್ಪೃಶ್ಯ, ಅಸ್ಪೃಶ್ಯ ಎಂಬ ಪದಗಳನ್ನು ಬಳಸಿಲ್ಲ. ವಾಸ್ತವ ಪರಿಸ್ಥಿತಿ ಹೀಗಿರುವಾಗ ಮುಖ್ಯಮಂತ್ರಿಗಳು ವರದಿ ಓದದೇ, ಯಾವ ಆಧಾರದ ಮೇಲೆ ಸಂವಿಧಾನ ಬಾಹೀರವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೀರಿ. ಈ ಬಗ್ಗೆ ಸ್ಪಷ್ಟಪಡಿಸಬೇಕೆಂದು ಆಗ್ರಹಿಸಿದರು.

ನಮ್ಮ ಸಹೋದರ ಸಮುದಾಯದ ಮಾದಿಗ ಸಮಾಜದ ಬಂಧುಗಳು ನಮಗೆ ಸಿಗಬೇಕಾದ ಎಲ್ಲ ಸೌಲಭ್ಯಗಳನ್ನು ಲಂಬಾಣಿ, ಭೋವಿ, ಕೊರಚ, ಕೊರಮ ಸಮಾಜದವರು ಕಬಳಿಸಿದ್ದಾರೆಂಬುದಾಗಿ ಕುರುಡಾಗಿ ಆರೋಪ ಮಾಡುತ್ತಿದ್ದಾರೆ. ಆದರೆ, ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಇಂದಿನ ವರೆಗೂ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 2300 ಜನ ಶಾಸಕರಾಗಿದ್ದಾರೆ. ಆ ಪೈಕಿ ಲಂಬಾಣಿ ಸಮಾಜದಿಂದ 35 ಜನ, ಭೋವಿ ಸಮಾಜದಿಂದ 20ರಿಂದ 25 ಜನ, ಕೊರಚ-ಕೊರಮ ಸಮಾಜದಿಂದ ಮೂರ್ನಾಲ್ಕು ಸೇರಿ ಒಟ್ಟು ಈ ಸಮುದಾಯಗಳಿಂದ ಒಟ್ಟು 100 ಮಂದಿ ಮಾತ್ರ ಶಾಸಕರಾಗಿದ್ದಾರೆ. ಹಾಗದಾರೆ, ಇನ್ನುಳಿದ 2200 ಜನ ಶಾಸಕರು ಯಾವ ಸಮಾಜಕ್ಕೆ ಸೇರಿದವರು. ಅಲ್ಲದೆ, ರಾಜ್ಯದಿಂದ ಎಸ್ಸಿ ಸಮುದಾಯಕ್ಕೆ ಸೇರಿದ 300 ಜನ ಸಂಸದರು ಆಯ್ಕೆಯಾಗಿದ್ದಾರೆ.

ಈ ವರೆಗೂ ಕೇವಲ ಭೋವಿ ಜನಾಂಗದಿಂದ ಮೂರು ಜನ ಮಾತ್ರ ಸಂಸದರಾಗಿ ಆಯ್ಕೆಯಾಗಿದ್ದು, ಲಂಬಾಣಿ, ಕೊರಚ, ಕೊರಮ ಸಮಾಜಗಳಿಂದ ಈ ವರೆಗೂ ಒಬ್ಬ ಸಂಸದರೂ ಆಯ್ಕೆಯಾಗಿಲ್ಲ.

ಹಾಗಾದರೆ, ಇನ್ನುಳಿದ 297 ಜನ ಸಂಸದರು ಯಾವ ಸಮಾಜಕ್ಕೆ ಸೇರಿದವರು ಎಂಬುದನ್ನು ಸೋದರ ಸಮಾಜದವರು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಎನ್.ಅನಂತನಾಯ್ಕ, ಜಯಣ್ಣ, ಸಿದ್ದರಾಮಣ್ಣ, ಗಂಗಾಧರ ನಾಯ್ಕ, ಚಿನ್ನಸಮುದ್ರ ಶೇಖರ್ ನಾಯ್ಕ, ಮಾರಪ್ಪ, ಲಿಂಗರಾಜ ನಾಯ್ಕ ಮತ್ತಿತರರು ಹಾಜರಿದ್ದರು.

ಮಲೆಬೆನ್ನೂರು ಪುರಸಭೆ

ಬಿಜೆಪಿ - ಜೆಡಿಎಸ್ ಮೈತ್ರಿಗೆ ಜಯ

ಮಲೇಬೆನ್ನೂರು

ಮಲೇಬೆನ್ನೂರು ಪುರಸಭೆ ಅಧ್ಯಕ್ಷೆ ಅಂಜನಮ್ಮ ವಿಜಯಕುಮಾರ್ ವಿರುದ್ಧ ಮಂಡಿಸಲಾದ ಅವಿಶ್ವಾಸ ಗೋತ್ತುವಳಿಯಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ಜಯಗಳಸಿದೆ.

ಮಲೇಬೆನ್ನೂರು ಪುರಸಭೆಯಲ್ಲಿ ಇಂದು ಮುಖ್ಯಾಧಿಕಾರಿ ನಾಗರತ್ನಮ್ಮ ನೇತೃತ್ವದಲ್ಲಿ ನಡೆಡ ಗೋತ್ತುವಳಿ ಸಭೆಯಲ್ಲಿ ಅಧ್ಯಕ್ಷರ ಪರವಾಗಿ 13 ಸದಸ್ಯರು ಹಾಜರಾಗಿದ್ದರು. ಕಾಂಗ್ರೆಸ್ ಸದಸ್ಯರು ಹಾಗೂ ಪಕ್ಷೇತರ ಸದಸ್ಯರ ಗೈರು ಹಾಜರಿಯಿಂದ ಮಲೇಬೆನ್ನೂರು ಪುರಸಭೆಯಲ್ಲಿ ಬಿಜೆಪಿ - ಜೆಡಿಎಸ್ ಮೈತ್ರಿ ಮುದುವರೆಯಲಿದೆ. ಪುರಸಭೆಯಲ್ಲಿ ಕಾಂಗ್ರೆಸ್ 8, ಜೆಡಿಎಸ್ 5, ಬಿಜೆಪಿ 7, ಪಕ್ಷೇತರ 3, ಸೇರಿದಂತೆ ಒಟ್ಟು 23 ಸದಸ್ಯರಿದ್ದು. ಅಧ್ಯಕ್ಷ ಸ್ಥಾನಕ್ಕೆ ಎಸ್ಸಿ ಮಹಿಳೆ ಮೀಸಲು ನಿಗದಿಯಾಗಿದ್ದು, ಬಿಜೆಪಿ, ಜೆಡಿಎಸ್ ಮೈತ್ರಿಯಿಂದ ಜೆಡಿಎಸ್‌ನ ಅಂಜಿನಮ್ಮನ ಪ್ರಸ್ತುತ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತದ್ದರು ಆದರೆ ಇತ್ತೀಚಿಗೆ ಬಿಜೆಪಿ ಮುಖಂಡರು ಶಾಸಕರ ದುರಾಡಳಿತ ಮಿತಿ ಮೀರಿದೆ.

ವಸತಿಯೋಜನೆಯಲ್ಲಿ ಮನೆಗಳ ಹಂಚಿಕೆ ಅವ್ಯವಹಾರವಾಗಿದೆ ಎಂದು ಅಸಮಾಧಾನಗೊಂಡು ಕಾಂಗ್ರೆಸ್ ಜೊತೆ ಕೈಜೋಡಿಸಲು ಅವಿಶ್ವಾಸ ನಿರ್ಣಯಕ್ಕೆ ಸಹಿ ಹಾಕಿದ್ದರು ಆದರೆ ಇದೀಗ ಬಿಜೆಪಿ ಸದಸ್ಯರು ಕಾಂಗ್ರೆಸ್ ಜೊತೆ ಹೋಗಲು ಹಿಂದೇಟು ಹಾಕಿದ ಹಿನ್ನಲೆಯಲ್ಲಿ ಮತ್ತು ವಸತಿ ಯೋಜನೆಯಡಿ ಹೆಚ್ಚುವರಿ ಮನೆಯ ಭರವಸೆಯನ್ನು ಶಾಸಕರು ನೀಡಿದ್ದಾರೆಂಬ ಮಾಹಿತಿ ಹಿನ್ನಲೆಯಲ್ಲಿ ಇಂದು ನಡೆದ ಅವಿಶ್ವಾಸ ಗೊತ್ತುವಳಿಯಲ್ಲಿ ಬಿಜೆಪಿ 7 ಸದಸ್ಯರು, ಜೆಡಿಎಸ್‌ನ 5 ಸದಸ್ಯರು ಹಾಗೂ ಶಾಸಕರ ಮತ ಸೇರಿ 13 ಸದಸ್ಯರು ಅಧ್ಯಕ್ಷರ ಪರವಾಗಿ ಇದ್ದರು. ಮತ್ತೆ ಬಿಜೆಪಿ-ಜೆಡಿಎಸ್ ಮೈತ್ರಿ ಮುಂದುವರೆದಿದೆ. ಪುರಸಭೆಯಲ್ಲಿನ ಮೈತ್ರಿಯ ಒಡಕಿನ ಲಾಭಪಡೆಯಲು ಹೊರಟ್ಟಿದ್ದ ಕಾಂಗ್ರೆಸ್ ಗೆ ಶಾಸಕ ಹೆಚ್ ಎಸ್ ಶಿವಶಂಕರ್ ತಿರುಗೇಟು ನೀಡಿ ಪಕ್ಷದಲ್ಲಿ ಅಧ್ಯಕ್ಷ ಸ್ಥಾನ ಉಳಿಸಿಕೊಂಡು ಕಾಂಗ್ರೆಸ್ ಸದಸ್ಯರಿಗೆ ಹಾಗೂ ಮುಖಂಡರಿಗೆ ಮುಖಭಂಗ ಮಾಡಿದ್ದಾರೆ.

ರೈತರಿಗೆ ತರಬೇತಿ: ಹೆಸರು ನೋಂದಾಯಿಸಿ

ಬಳ್ಳಾರಿ

ಹೂವಿನಹಡಗಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ವಾಣಿಜ್ಯ ಕೃಷಿ, ತೋಟಗಾರಿಕೆ ಬೆಳೆಗಳ ಉತ್ಪಾದನೆ, ಸಂಸ್ಕರಣೆ ಹಾಗೂ ಮಾರುಕಟ್ಟೆ ಕುರಿತು ಮೂರು ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಡಗಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತಾರಣಾ ಮುಂದಾಳು ಅವರು ತಿಳಿಸಿದ್ದಾರೆ.

ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಹಾಗೂ ಕೂಡ್ಲಿಗಿ ತಾಲೂಕಿನ ವ್ಯಾಪ್ತಿಯ 30 ಜನ ರೈತರಿಗೆ ಮಾತ್ರ ಸೀಮಿತವಾಗಿರುತ್ತದೆ.

ಆಸಕ್ತರು ರೈತ ಬಾಂಧವರು ಫೆ.22ರೊಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ.08399-240092 ಅಥವಾ ಮೊ.9482070031 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಬ್ಬಡಿ ಫೈನಲ್ ಪಂದ್ಯ:ಬಾಗಲ ಕೋಟೆ ತಂಡಕ್ಕೆ ರೋಚಕ ಜಯ

ಕೈಯಿಗೆ ಬಂದ ತುತ್ತು ಬಾಯಿಗೆ ಬರಲಿಲ್ಲ -ಚಿತ್ರದುರ್ಗ ದ್ವಿತೀಯ ಸ್ಥಾನ

ಬಳ್ಳಾರಿ

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮೂರು ದಿನಗಳಿಂದ ನಡೆದ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ ಸೋಮವಾರ ಸಮಾರೋಪ ಸಮಾರಂಭ ನಡೆಯಿತ್ತು. ಈ ಸಮಯದಲ್ಲಿ ಸೋಮವಾದ ಸಂಜೆ ನಡೆದ ಕಬ್ಬಡಿ ಪಂದ್ಯವಳಿಯಲ್ಲಿ ಚಿತ್ರದುರ್ಗ ಮತ್ತು ಬಾಗಲಕೋಟೆ ಜಿಲ್ಲೆಯ ತಂಡಗಳು ಫೈನಲ್ ಪಂದ್ಯವನ್ನು ಆಡಿದರು. ಮೊದಲು ಟಾಸ್ ಗೆದ್ದ ಚಿತ್ರದುರ್ಗ ತಂಡವು ಅಂಕಣವನ್ನು ಆಯ್ಕೆ ಮಾಡಿಕೊಂಡಿತು.

ಪಂದ್ಯವು ಮೊದಲ ಆಫ್ ಕೋರ್ಟ್ 15 ನಿಮಿಷ, 05 ನಿಮಿಷ ವಿಶ್ರಾಂತಿ, ಆಫ್ ಕೋರ್ಟ್ 15 ನಿಮಿಷದ ಆಟವನ್ನು ಆಡಿಸಿದರು. ಆರಂಭದಲ್ಲಿ ಬಾಗಲಕೋಟೆ ತಂಡ ಮತ್ತು ಚಿತ್ರದುರ್ಗ ತಂಡವು ಯಾವುದೇ ಅಂಕವನ್ನು ಪಡೆಯದೇ ಸರಲ ರೈಡ್ ಗಳನ್ನು ಮಾಡಿ ಒಂದೊಂದು ಅಂಕಗಳಿಸಲು ಆಂಭಸಿದರು.

ಮೊದಲ ಅರ್ಧ ಕೋರ್ಟ್‌ಗೆ ಚಿತ್ರದುರ್ಗ 3 ಅಂಕಗಳನ್ನು ಪಡೆದರೇ, ಬಾಗಲಕೋಟೆ 2 ಅಂಕಗಳನ್ನು ಗಳಿಸಿ, ಚಿತ್ರದುರ್ಗ ತಂಡವು ಮುಂದೆ ಇತ್ತು. ಇಲ್ಲಿ ಚಿತ್ರದುರ್ಗ ತಂಡದ ಎಲ್ಲಾ ಆಟಗಾರರು ಅಂಕಣದಲ್ಲಿ ಗದ್ದಲ ಮಾಡಿದಕ್ಕೆ ಪಂದ್ಯ ರೇಫ್ರಿ ಕೆ.ಎರಿಸ್ವಾಮಿ ಹಸಿರು ಕಾರ್ಡನ್ನು ತೋರಿಸಿ ಎಚ್ಚರಿಯನ್ನು ನೀಡಿದರು.

ಎರಡನೇ ಆಫ್ ಕೋರ್ಟ್‌ನಲ್ಲಿ ಚಿತ್ರದುರ್ಗ ಮತ್ತು ಬಾಗಲಕೋಟೆ ತಂಡಗಳು 7 ಅಂಕಗಳನ್ನು ಪಡೆದುಕೊಂಡು ಸಮವಾಗಿದ್ದವು. ಬಾಗಲ ಕೋಟೆ ತಂಡದ ಆಟಗಾರನಿಗೂ ಹಸಿರು ಕಾರ್ಡ ತೋರಿಸಿ ಎಚ್ಚರಿಕೆಯನ್ನು ರೇಫ್ರಿ ನೀಡಿದರು. ಕೊನೆಯ 30 ಸೆಕೆಂಡ್‌ನಲ್ಲಿ ಬಾಗಲಕೋಟೆ ತಂಡ ಆಟಗಾರ ಕ್ಷೀರಸಾಗರ್ ರೈಡ್ ಮಾಡಿ ಚಿತ್ರದುರ್ಗ ತಂಡದ ಆಟಗಾರನ ಭುಜ ಮುಟ್ಟಿ ಒಂದು ಅಂಕ ಪಡೆದು ಬಾಗಲಕೋಟೆ ತಂಡ ರೋಚಕ ವಿಜಯವನ್ನು ಸಾಧಿಸಿತ್ತು. ಜನರಲ್ಲಿ ಬಹಳ ಕೂತುಹಲವನ್ನು ಮುಡಿಸಿ, ಸಂತೋಷದಿಂದ ಪಂದ್ಯವನ್ನು ನೋಡಿದರು.

ಬಾಗಲಕೋಟೆ ತಂಡದ ಆಟಗಾರರಾದ ಎಸ್.ಡಿ ಆನದಿನ್ನಿ, ಎಸ್.ಡಿ ನ್ಯಾಮಗೌಡ, ಎಂಎಸ್ ಗಡೆನ್ನವರ, ಅಶೋಕ್, ಜಿಎಲ್ ರಾಠೋಡ್, ಮಠಪರಿ, ಕೋತಿನ, ಮುಳ್ಳೂರ, ಚಿಮ್ಮಲಗಿ, ತಳವಾರ, ಕ್ಷೀರಸಾಗರ್, ಸಬಕಾಳೆ, ದಿವಾಣದ, ಸರಕಾವಸ್, ಮಠದ್ ಉತ್ತಮ ಪ್ರದರ್ಶವನ್ನು ನೀಡಿದರು.

ಫೈನಲ್ ಪಂದ್ಯಕ್ಕೆ ರೇಫ್ರಿಯಾಗಿ ಕೆ.ಎರಿಸ್ವಾಮಿ, ಅಂಪೈರ್ ರಾಗಿ ಪ್ರಶಾಂತ್, ಶಾಂತನಾಯ್ಕ್, ಸ್ಕೋರರ್ ಗುಣಲೇಕ ಮತ್ತು ಬಿ.ಜಿ ಮಂಜುನಾಥ್ ನಿರ್ವಹಿಸಿದರು.

ಭಾರತಿಯ ಸಂಪ್ರದಾಯ-ಸಂಸ್ಕೃತಿ ಎಂದಿಗೂ ಬದಲಾಗಲ್ಲ

ರಾಣಿಬೆನ್ನೂರ

ಆಧುನಿಕ ಭರಾಟೆಯಲ್ಲಿ ಇಂದಿನ ಯುವಕ ಮತ್ತು ಯುವತಿಯರು ಪಾಶ್ಚಿಮಾತ್ಯ ಸಂಸ್ಕೃತಿಗೆ ಮೊರೆ ಹೋಗುವುದರ ಮೂಲಕ ನಮ್ಮ ಭಾರತೀಯ ಸಂಪ್ರದಾಯವನ್ನು ಮರೆಯುತ್ತಿದ್ದಾರೆ ಎಂದು ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಿತ್ಯಾನಂದ ಕುಂದಾಪುರ ವಿಷಾಧಿಸಿದರು.

ಮಂಗಳವಾರ ತಾಲೂಕಿನ ಮಾಗೋಡ ಗ್ರಾಮದಲ್ಲಿ ನೂತನ ಸ್ವಾಕರವೇ ಗ್ರಾಮ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇದು ಹೀಗೆ ಸಾಗಿದರೆ ತಮ್ಮ ಭವಿಷ್ಯವನ್ನು ತಾವೇ ಅಧೋಗತಿಗೆ ಕೊಂಡೊಯ್ದುಕೊಳ್ಳುತ್ತಿದ್ದಾರೆ, ಈ ಒಂದು ವ್ಯವಸ್ಥೆಗೆ ಪಾಲಕರು ಮತ್ತು ಪೋಷಕರು ಸಹಕರಿಸುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು.

ಪವಿತ್ರವಾದ ಭರತ ಭೂಮಿಯಲ್ಲಿ ಜನಿಸಿದವರೆಲರೂ ಪುಣ್ಯವಂತರು. ಹೀಗಿರುವಾಗ ಮೊದಲು ನಾವು ಪರಿಶುದ್ಧತೆಯ ಜೀವನದಲ್ಲಿ ಸಾಗಬೇಕಿದೆ. ನಮ್ಮ ಭಾಷೆ, ನೆಲ, ಜಲ, ಸಂಸ್ಕೃತಿಯನ್ನು ಮರೆಮಾಚದಂತೆ ನಮ್ಮ ತನದಲ್ಲಿ ನಾವುಗಳು ಸಾಗಿದಾಗ ಮಾತ್ರ ಈ ಭರತ ಭೂಮಿಯಲ್ಲಿ ಜನಿಸಿದ್ದಕ್ಕೂ ಸಾರ್ಥಕವಾಗುತ್ತದೆ ಎಂದರು.

ಈ ನಾಡಿನಲ್ಲಿ ಹುಟ್ಟಿದವರು ಕನ್ನಡ ಭಾಷೆಯ ಬಗ್ಗೆ ಅಭಿಮಾನವನ್ನು ಹೊಂದಬೇಕು. ಕನ್ನಡದಲ್ಲಿಯೇ ವ್ಯವಹರಿಸುವ ಮತ್ತು ಮಾತನಾಡುವ ಸಂಸ್ಕೃತಿಯನ್ನು ಅಳವಡಿಸಿಕೊಂಡು ಸಾಗಿದಾಗ ಮಾತ್ರ ಕನ್ನಡ ಭಾಷೆಗೆ ಹಾಗೂ ನಾಡಿಗೆ ನಾವುಗಳು ಅಪಾರವಾದ ಕೊಡುಗೆ ನಿಡಿದಂತಾಗುತ್ತದೆ ಎಂದರು.

ಸಂಘಟನೆಯ ಗೌರವಾಧ್ಯಕ್ಷ ರಾಮಪ್ಪ ಮುದಿಗೌಡ್ರ ಮಾತನಾಡಿ, ಸಮಾಜದ ಆಗು ಹೋಗುಗಳ ಬಗ್ಗೆ ಸರ್ವರೂ ಚಿಂತನೆ ಮಾಡುವ ಅವಶ್ಯಕತೆ ಇದೆ. ಸರ್ವರೂ ನಾಡು ನುಡಿಯ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಬೇಕಿದೆ. ಸ್ವಾತಂತ್ರ್ಯ ಹೋರಾಟಗಾರರ, ಯೋಧರ, ಸಾಧು ಸಂತರ, ಶರಣರ, ದಾರ್ಶನಿಕರ ಜೀವನ ಚರಿತ್ರೆಗಳನ್ನು ಓದುವುದರ ಮೂಲಕ ಅವರ ಆದರ್ಶ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗಿದಾಗ ಮಾತ್ರ ನಾವು ಆದರ್ಶರಾಗಿರಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾಧ್ಯಕ್ಷ ಶಿವಕುಮಾರ ಜಾಧವ, ತಾಲೂಕಾಧ್ಯಕ್ಷ ಚಂದ್ರು ಕಡ್ಲಿಗೊಂದಿ, ರಾಜ್ಯ ಸಂಚಾಲಕ ಶಮಸುದ್ದಿನ್ ಕೆ, ಗ್ರಾಮ ಘಟಕ ಅಧ್ಯಕ್ಷ ಗಿರೀಶ ಮುದಿಗೌಡ್ರ, ಬಸವರಾಜ ಹಾದಿಮನಿ, ಯಲ್ಲರಡ್ಡಿ ಕೆಂಚರಡ್ಡಿ, ಮಂಜುನಾಥ ಮಾಕನೂರ, ಬಸವರಾಜ ಕರ್ಜಗಿ, ಬಸವರಾಜ ಮುದಿಗೌಡ್ರ, ಸೋಮನಗೌಡ ಹಾಲಬಾವಿ, ರಾಮಪ್ಪ ಮುದಕನಗೌಡ್ರ, ಚನ್ನಬಸಪ್ಪ ಮಾಕನೂರ, ಸಂತೋಷ ಸಿದ್ದಪ್ಪಳವರ, ಹನುಮಂತಗೌಡ ಹಾಲಬಾವಿ, ವೆಂಕಟೇಶ ಕೆಂಚರಡ್ಡಿ, ಮಾರುತಿ ಮುದಿಗೌಡ್ರ, ಮಹ್ಮದಲಿ ದೊಡ್ಡಮನಿ, ಸುರೇಶ ಓಲೇಕಾರ, ಚಂದ್ರಪ್ಪ ಹಾದಿಮನಿ, ಬಸವರಾಜ ಕರ್ಜಗಿ ಸೇರಿದಂತೆ ಮತ್ತಿತರರು ಇದ್ದರು

ಒತ್ತಡದ ಸಂದರ್ಭದಲ್ಲೂ ಸಮಾಧಾನದಿಂದ ಬದುಕಿ

ಶಿಗ್ಗಾವಿ

ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಸೋಮವಾರ ತ್ರಿಮೂರ್ತಿ ಶಿವಜಯಂತಿಯ ಪ್ರಯುಕ್ತ ಶಿವ ಧ್ವಜಾರೋಹಣ ಮತ್ತು ಜ್ಯೋತಿ ಬೆಳಗಿಸುವ ಕಾರ್ಯಕ್ರಮ ನೆರವೇರಿಸಲಾಯಿತು.

ಪಟ್ಟಣದ ಜೋಳದ ಪೇಟೆಯಲ್ಲಿರುವ ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿ ಪುರಸಭೆ ಅಧ್ಯಕ್ಷ ಶಿವಪ್ರಸಾದ ಸುರಗಿಮಠ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಧ್ವಜಾರೋಹಣ ನೆರವೇರಿಸಿದರು.

ಭರತ ಸೇವಾ ಸಂಸ್ಥೆ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ ಜ್ಯೋತಿ ಬೆಳಗಿಸಿ ಮಾತನಾಡಿ, ಜೀವನದಲ್ಲಿ ಬಹಳಷ್ಟು ಕೆಲಸ ಕಾರ್ಯಗಳಲ್ಲಿ ನಾವೆಲ್ಲ ಒತ್ತಡದ ಜೀವನ ಸಾಗಿಸುವ ಸಂದರ್ಭದಲ್ಲಿ, ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹಾಗೂ ಆಶ್ರಮಗಳು ಅಮೂಲ್ಯವಾದ ಶಾಂತಿ ಸಮಾದಾನದಿಂದ ಬದುಕಲು ಕಲಿಸುತ್ತವೆ. ಶ್ರೇಷ್ಟತೆ ಮತ್ತು ಬಾವೈಕ್ಯತೆ ತುಂಬುವಲ್ಲಿ ಈಶ್ವರೀಯ ವಿಶ್ವ ವಿದ್ಯಾಲಯ ತುಂಬಾ ಪ್ರಮುಖವಾಗಿದೆ ಕೇಂದ್ರದಲ್ಲಿ ಈಶ್ವರೀಯ ಜ್ಞಾನ ತುಂಬುವ ಬೋಧಕರ ಸೇವೆ ಅಮೂಲ್ಯವಾದುದು, ಅವರು ಸಮಾಜದ ಒಳಿತಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಸೇವೆ ಮಾಡುತ್ತಾರೆ. ಆಶ್ರಮದಲ್ಲಿ ಜಾತಿಬೇದ, ಬಡವ ಶ್ರೀಮಂತ ಎಂಬ ಬೇದಬಾವವಿಲ್ಲದೇ ಎಲ್ಲರಿಗೂ ಸಮನಾಗಿ ಜ್ಞಾನತುಂಬುವ ಕಾರ್ಯ ನಿರಂತರವಾಗಿದೆ. ಆಶ್ರಮದ ಅಭಿವೃದ್ದಿಗಾಗಿ ತನು, ಮನ, ಧನದಿಂದ ನಾನೂ ಸೇವೇ ಸಲ್ಲಿಸುತ್ತೇನೆ ಎಂದರು.

ಪುರಸಭೆ ಅಧ್ಯಕ್ಷ ಶಿವಪ್ರಸಾದ ಸುರಗಿಮಠ ಮಾತನಾಡಿ, ಆಧುನಿಕ ಜೀವನದಲ್ಲಿ ಶಾಂತಿ, ಸೌಹಾರ್ದತೆ, ಆಧ್ಯಾತ್ಮಿಕ ಜ್ಞಾನ ತುಂಬುವಲ್ಲಿ ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪಾತ್ರ ತುಂಬಾ ಪ್ರಮುಖವಾಗಿದೆ ಎಂದರು.

ಪಕ್ಕೀರಪ್ಪ ಕುಂದೂರ ಮಾತನಾಡಿ, ಜೀವನದ ಜೊಂಜಾಟದಲ್ಲಿ ತೊಳಲಾಡುತ್ತಿದ್ದ ನನಗೆ ಈಶ್ವರೀಯ ವಿಶ್ವ ವಿದ್ಯಾಲಯದಲ್ಲಿನ ಜ್ಞಾನ ಮತ್ತು ಅಮೃತ ವಾಣಿ ಶಾಂತಿ, ಸಹನೆ, ಆದ್ಯಾತ್ಮಿಕ ಜ್ಞಾನ ಸಂತೋಷ ಸಾಗರದಲ್ಲಿ ತೇಲಿಸುತ್ತಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಪುರಸಭೆ ಸದಸ್ಯ ಸುಭಾಸ ಚವ್ಹಾಣ ಮಾತನಾಡಿ, ಜೀವನದಲ್ಲಿ ಮನಸ್ಸಿನ ಶಾಂತಿ, ಏಕಾಗ್ರತೆ, ನೀಡುವಲ್ಲಿ ಈಶ್ವರೀಯ ವಿಶ್ವ ವಿದ್ಯಾಲಯದ ಮಹತ್ವದ್ದಾಗಿದೆ, ನಾನು ವಿದ್ಯಾಲಯದ ಕೇಂದ್ರ ಸ್ಥಾನವಾದ ಮೌಂಟ್ ಅಭು ಪ್ರವಾಸದಿಂದ ನನ್ನ ಜೀವನದಲ್ಲಿ ಹಲವು ಬದಲಾವಣೆ ಕಂಡುಕೊಂಡಿದ್ದೇನೆ, ನಿತ್ಯ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಈಶ್ವರೀಯ ಭೋಧಕರಾದ ಸುದಕ್ಕನವರು, ಇತರ ಕೇಂದ್ರಗಳಿಂದ ಬಂದ ಬೋದಕರು ಆಶೀರ್ವಚನ ನೀಡಿದರು.

ಹಿರಿಯರಾದ ನರಗುಂದ ಗುರುಗಳು ಹಾಗು ಆಶ್ರಮದ ಪರಿವಾರದವರು ಉಪಸ್ಥಿತರಿದ್ದರು.

ರುದ್ರಮುನಿ ಶಿವಯೋಗಿಗಳ ಆದರ್ಶಗಳನ್ನು ಪಾಲಿಸಬೇಕು

ಗುತ್ತಲ

ಲಿಂಗೈಕ್ಯ ಶ್ರೀ ರುದ್ರಮುನಿ ಶಿವಯೋಗೀಗಳು ಮಹಾನ್ ತಪಸ್ವಿಗಳಾಗಿದ್ದು, ಅವರ ಜೀವನ ದರ್ಶನ ನಮಗೆ ಮಾರ್ಗದರ್ಶನವಾಗಿದೆ ಎಂದು ಅಗಡಿ ಅಕ್ಕಿ ಮಠದ ಗುರುಲಿಂಗ ಸ್ವಾಮಿಜಿ ಹೇಳಿದರು.

ಪಟ್ಟಣದಲ್ಲಿನ ಕಲ್ಮಠದ ಲಿಂಗೈಕ್ಯ ಶ್ರೀ ರುದ್ರಮುನಿ ಶಿವಯೋಗೀಶ್ವರ ಸ್ವಾಮಿಜಿಗಳ 138ನೇ ಜಯಂತೋತ್ಸವ ಅಂಗವಾಗಿ ಭಾನುವಾರ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿ, ರುದ್ರಮುನಿ ಶಿವಯೋಗೀಗಳು ನಡೆದಾಡಿರುವ ಈ ಪವಿತ್ರ ಭೂಮಿಯಲ್ಲಿ ತಾವೆಲ್ಲರೂ ಧನ್ಯರು. ಅವರ ತತ್ವ ಉಪದೇಶಗಳನ್ನು ನಿತ್ಯವೂ ಪಾಲಿಸುತ್ತಾ, ಇಷ್ಟ ಲಿಂಗ ಪೂಜೆ, ಧರ್ಮ ಸಂಹಿಷ್ಣುತೆಯನ್ನು ತಾವೆಲ್ಲರೂ ಬೆಳಸಿಕೊಳ್ಳಬೇಕು ಎಂದು ಗುರುಲಿಂಗ ಸ್ವಾಮಿಜಿ ಹೇಳಿದರು.

ಜಯಂತೋತ್ಸವ ಅಂಗವಾಗಿ ಪ್ರಾತಃ ಕಾಲ ಶ್ರೀಗಳ ಗದ್ದುಗೆಗೆ ಮಹಾ ರುದ್ರಾಭಿಷೇಕ ಹಾಗೂ ಮಂಗಳಾರತಿ ನಡೆಯಿತು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ರುದ್ರಮುನಿ ಶಿವಯೋಗೀಶ್ವರ ಸ್ವಾಮಿಜಿಗಳ ಭಾವಚಿತ್ರದ ಭವ್ಯ ಮೆರವಣಿಗೆ ಅದ್ದೂರಿಯಾಗಿ ನೆರವೇರಿತು. ತರಯವಾಯ ಅನ್ನಸಂತರ್ಪಣೆ ಜರುಗಿತು.

ಇದಕ್ಕು ಮುನ್ನ ಬಸ್ ನಿಲ್ದಾಣದ ಪಕ್ಕದಲ್ಲಿನ ಶ್ರೀ ರುದ್ರಮುನಿ ಶಿವಯೋಗೀಶ್ವರರ ವೃತ್ತದಲ್ಲಿ ನೂತನ ನಾಮ ಫಲಕವನ್ನು ನಿಲ್ಲಿಸಿ ಪೂಜೆ ಸಲ್ಲಿಸಲಾಯಿತು.

ಕಲ್ಮಠ ಹಾಗೂ ಅಗಡಿ ಪ್ರಭುಸ್ವಾಮಿ ಮಠದ ಸಂಗನಬಸವ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು, ಹತ್ತಿಮತ್ತೂರ ವಿರಕ್ತಮಠದ ನಿಜಗುಣ ಸ್ವಾಮಿಜಿ ಅಧ್ಯಕ್ಷತೆ ವಹಿಸಿದ್ದರು. ಗೋಲಗೇರಿ ವಿರಕ್ತ ಮಠದ ಸಿದ್ದಲಿಂಗ ಸ್ವಾಮಿಜಿ, ಗುಡ್ಡದ ಆನ್ವೇರಿಯ ಶಿವಯೋಗೀಶ್ವರ ಸ್ವಾಮಿಜಿ, ಕಂಪ್ಲಿ ಕಲ್ಮಠದ ಅಭಿನವಪ್ರಭು ಸ್ವಾಮಿಜಿ, ಬೆಳಟ್ಟಿ ರಾಮಲಿಂಗೇಶ್ವರಮಠದ ಬಸವರಾಜ ಸ್ವಾಮಿಜಿ, ಅಗಡಿ ಅಕ್ಕಿಮಠದ ಗುರುಲಿಂಗ ಸ್ವಾಮಿಜಿ ಸಮ್ಮುಖ ವಹಿಸಿದ್ದರು. ಗುತ್ತಲ ಕಲ್ಮಠ-ಅಗಡಿ ಪ್ರಭುಸ್ವಾಮಿ ಮಠದ ಗುರುಸಿದ್ದ ಸ್ವಾಮಿಜಿ ನೇತೃತ್ವ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಿ.ಪಂ ಮಾಜಿ ಸದಸ್ಯ ವಸಂತ ಕಳಸಣ್ಣನವರ, ಪ.ಪಂ ಸದಸ್ಯ ರಮೇಶ ಮಠದ, ಗ್ರಾ.ಪಂ ಮಾಜಿ ಉಪಾಧ್ಯಕ್ಷ ಪಿ.ಎನ್ ಹೇಮಗಿರಿಮಠ, ಬಸವರಾಜಯ್ಯ ಭೂಸನೂರಮಠ, ಕೃಷ್ಣಾ ಜಮಾದಾರ, ಮೃತ್ಯುಂಜಯ ರಿತ್ತಿಮಠ, ಪ್ರಕಾಶ ಕೆಂಚಮಲ್ಲ, ಫಕ್ಕೀರಯ್ಯ ಕುಲಕರ್ಣಿ, ಕೃಷ್ಣಾ ಚಕ್ರಸಾಲಿ, ನಿಂಬಣ್ಣ ಅಂಗಡಿ, ಶಶಿಕುಮಾರ ಮಾನಸ, ಅಜ್ಜಪ್ಪ . ಕೆಂಚಮಲ್ಲ, ರಾಜು ಬಡಿಗೇರ ಸೇರಿದಂತೆ ಅನೇಕರಿದ್ದರು.

ಗ್ರಾಮ ದೇವತೆ ಜಾತ್ರೆಗೆ ಡಿ.ಜೆ ಅಳವಡಿಸಲು ಪ್ರತಿಭಟನೆ

ಶಿಗ್ಗಾವಿ

ಪಟ್ಟಣದ ಐತಿಹಾಸಿಕ ಗ್ರಾಮದೇವಿ ಜಾತ್ರೆಯು ಇದೇ 16 ರಿಂದ 25 ರ ವರೆಗೆ ನಡೆಯಲಿದ್ದು ಫೆ. 17 ರಂದು ಶನಿವಾರ ಬೆಳಿಗ್ಗೆ ಪಾದಗಟ್ಟಿಯಲ್ಲಿ ಶ್ರೀದೇವಿಯನ್ನು ಗದ್ದುಗೆಗೊಳಿಸುವುದರಿಂದ ಮೆರವಣಿಗೆಗೆ ಡಿ. ಜೆ ಹಚ್ಚುವಂತೆ ಅಗ್ರಹಿಸಿ ಶ್ರೀ ದ್ಯಾಮವ್ವ ದೇವಿ ಜಾತ್ರಾ ಸಮೀತಿಯವರ ಹಾಗೂ ಪಟ್ಟಣದ ಯುವಕರ ನಡುವೆ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣವಾದ ಘಟನೆ ಸೊಮವಾರ ಸಾಯಂಕಾಲ ಜರುಗಿತು.

ಪಟ್ಟಣದ ಯುವಕರು ಸೊಮವಾರ ಸಾಯಂಕಾಲ ಡೊಳ್ಳು ಬಡೆಯುತ್ತ ನೂರಾರು ಯುವಕರು ಜಾತ್ರಾ ಸಮೀತಿ ಅಧ್ಯಕ್ಷರ ಹಾಗೂ ಸದಸ್ಯರ ಸಮ್ಮುಖದಲ್ಲಿ ಡಿಜೆ ಹಚ್ಚಲು ಪರವಾನಿಗೆ ಪಡೆಯಲೇಬೇಕು ಎಂದು ಪಟ್ಟು ಹಿಡಿದರು, ನಂತರ ಜಾತ್ರಾ ಸಮೀತಿಯ ಸದಸ್ಯ ಭರಮಜ್ಜ ನವಲಗುಂದ ಯುವಕರನ್ನು ಸಮಾಧಾನ ಪಡಿಸಿ ಪರವಾನಿಗೆಯನ್ನು ಕೇಳುತ್ತೇವೆ ಆದರೆ ಪರವಾನಿಗೆ ನೀಡದೆ ಹೋದರೆ ಏನು ಮಾಡಲು ಸಾದ್ಯವಿದೆ ಎಂದು ಪ್ರಶ್ನಿಸಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಯುವಕರು ಬೇರೆ ತಾಲೂಕು ಮತ್ತು ಜಿಲ್ಲೆಗಳಲ್ಲಿ ಪರವಾನಿಗೆ ನೀಡುತ್ತಾರೆ ಸೌಹಾರ್ಧತೆಗೆ ಹೆಸರಾದ ನಮ್ಮಲ್ಲೇಕೆ ಈ ತಾರತಮ್ಯ ಎಂದು ಪ್ರಶ್ನಿಸಿದರು, ಇದಕ್ಕೆ ಉತ್ತರಿಸಿದ ಸಮೀತಿ ಸದಸ್ಯರು ಕಾನೂನಿನ ಚೌಕಟ್ಟಿನಲ್ಲಿ ಏನು ಬರುತ್ತದೆಯೋ ಅದನ್ನು ಜಾತ್ರಾ ಸಮೀತಿ ಸದಸ್ಯರು ಪಾಲಿಸುತ್ತೇವೆ ಪರವಾನಿಗೆ ನೀಡಿದರೆ ವಿಜೃಂಭಣೆಯಿಂದ ಜಾತ್ರೆಯನ್ನು ಆಚರಿಸಲು ನಮ್ಮದೇನು ಅಭ್ಯಂತರವಿಲ್ಲ ಎಂದು ಸ್ಪಷ್ಟಪಡಿಸಿದರು.

ಒಟ್ಟಾರೆ ಶಿಗ್ಗಾವಿ ಪಟ್ಟಣದಲ್ಲಿ ಡಿ ಜೆ ವಿಷಯಕ್ಕೆ ಸಂಭಂದಿಸಿದಂತೆ ತಾಲೂಕಿನ ಜನಪ್ರತಿನಿಧಿಗಳು ಹಾಗೂ ಯುವ ಸಮೂಹದ ನಡುವೆ ವೈಮನಸ್ಸು ತಾರಕಕ್ಕೆ ಏರುತ್ತಿದ್ದರೂ ಅದು ಯಾವ ಯಾವ ಸಂದರ್ಭದಲ್ಲಿ ಯಾವ ರೀತಿ ಸ್ವರೂಪ ಪಡೆಯುತ್ತದೆ ಎಂಬುದನ್ನು ಕಲವೇ ನಿರ್ಣಯಿಸಬೇಕಿದೆ.

ಮೂಕ ಪ್ರೇಕ್ಷಕರಾದ ಪೋಲೀಸ್ ಇಲಾಖೆ :

ಡಿ ಜೆ ವಿಷಯಕ್ಕೆ ಸಂಭಂದಿಸಿದಂತೆ ಯುವಕರ ಹಾಗೂ ಸಮೀತಿ ಸದಸ್ಯರ ನಡುವೆ ವಾಗ್ವಾದ ನಡೆಯುತ್ತಿದ್ದರೂ ಕೇವಲ ಮೂಕ ಪ್ರೇಕ್ಷಕರಾಗಿ ಪೋಲೀಸ್‌ರು ನಿಂತಿದ್ದರೆ ವಿನಹ ಯುವಕರನ್ನು ಸಮಾಧಾನ ಪಡಿಸುವಲ್ಲಿ ಮುಂದೆ ಬರದೇ ಇರುವುದು ಅಲ್ಲಿಯೇ ಇದ್ದ ಸಾರ್ವಜನಿಕರು ಗುಸು ಗುಸು ಮಾತನಾಡಿಕೊಳ್ಳುವಂತೆ ಮಾಡಿತು.

ಈ ಸಂದರ್ಭದಲ್ಲಿ ಜಾತ್ರಾ ಸಮೀತಿ ಅದ್ಯಕ್ಷ ಶಂಕರಗೌಡ್ರ ಪಾಟೀಲ, ಸದಸ್ಯರಾದ ಭರಮಜ್ಜ ನವಲಗುಂದ, ಟಿ ವಿ ಸುರಗೀಮಠ, ಶಶಿಧರ ಯಲಿಗಾರ ಹಾಗೂ ಸಮೀತಿ ಸದಸ್ಯರು ಹಾಗೂ ಪಟ್ಟಣದ ಯುವಕರು ಹಾಜರಿದ್ದರು.

ಸರಕಾರಗಳು ಖಸಾಯಿಖಾನೆ ಹಾಗೂ ಮದ್ಯಪಾನ ನಿಷೇಧ ಮಾಡಲಿ

ಬ್ಯಾಡಗಿ

ಜಲ್ಲಿಕಟ್ಟು ಕಂಬಳ, ಹೋರಿ ಬೆದರಿಸು ವಂತಹಗ್ರಾಮೀಣ ಸೋಗಡಿನಜನಪದ ಹಬ್ಬಗಳನ್ನು ಆಚರಿಸಿಲು ಹತ್ತಾರು ಕಾನೂನು ನಿರ್ಮಾಣ ಮಾಡಿ ಕ್ರೀಡೆಗಳನ್ನು ಅವಸಾನದಂಚಿಗೆತಳ್ಳುತ್ತಿರುವ ಸರಕಾರಗಳು ಖಸಾಯಿಖಾನೆ ಹಾಗೂ ಮದ್ಯಪಾನ ನಿಷೇಧ ಮಾಡಲಿ ಎಂದು ಕೃಷಿಕ ಸಮಾಜದ ಮುಖಂಡಗಂಗಣ್ಣ ಎಲಿ ಆಗ್ರಹಿಸಿದರು.

ಪಟ್ಟಣದಗೋಣಿಬಸವೇಶ್ವರದೇವಸ್ಥಾನ 'ದಲ್ಲಿಇರವಿ ಬಸವೇಶ್ವರಯುವಕ ಮಂಡಳ ವತಿಯಿಂದ ಆಯೋಜಿಸಿದ್ದ 36 ನೇ ರಾಜ್ಯ ಮಟ್ಟದ ಹೋರಿ ಬೇದರಿಸುವ ಸ್ವರ್ದೆ ಶಾಂತಿಯುಯವಾಗಿ ಮುಕ್ತಾಯಗೊಂಡ ಹಿನ್ನಲೆಯಲ್ಲಿಕರೆದಿದ್ದಅಭಿನಂದನಾಸಭೆಯಲ್ಲಿಅವರು ಮಾತನಾಡಿದರು.

ಕಳೆದ 36 ವರ್ಷಗಳಿಂದ ನಿರಂತರವಾಗಿ ಸ್ವರ್ದೆಯನ್ನುಆಯೋಜನೆ ಮಾಡುತ್ತಾ ಬಂದಿದ್ದೇವೆ. ಗ್ರಾಮೀಣ ಕ್ರೀಡೆಗಳಿಗೆ ಇನ್ನೂಜನ ಬೆಂಬಲವಿದೆಏನ್ನುವುದಕ್ಕೆ ಪ್ರಸಕ್ತ ವರ್ಷದ ಸ್ವರ್ದೆಯಲ್ಲಿ ಸೇರಿದ್ದ ಸುಮಾರು 40 ಸಾವಿರಕ್ಕೂ ಹೆಚ್ಚು ಜನರೆ ಸಾಕ್ಷಿಎಂದರು.

ಕಸಾಯಿ ಖಾನೆ ಮುಚ್ಚಿಸಿ:ಹೋರಿ ಬೆದರಿಸುವ ಸ್ವರ್ದೆಗೆ ಪ್ರಾಣಿ ಹಿಂಸೆ ಎಂಬ ಹಣೆ ಪಟ್ಟಿಕಟ್ಟುತ್ತಿರುವುದುದುರಂತದ ವಿಷಯ.ಈ ಸ್ವರ್ದೆ ಹಿಂದೆಅನ್ನುವುದಾದರೆದೇಶಾದ್ಯಂತಆಹಾರ ಎಂಬ ನೆಪವೊಡ್ಡಿ ಲಕ್ಷಾಂತದ ರಾಸುಗಳನ್ನು ಹತ್ಯೆ ಮಾಡ ಲಾಗುತ್ತಿದೆ ಮೊದಲುಈಂತಹ ಕಸಾಯಿಖಾನೆಗಳನ್ನು ಮುಚ್ಚಿಸಿ ಎಂದು ಆಗ್ರಹಿಸಿದರಲ್ಲದೇ ಏಲ್ಲೋ ನಡೆದ ಕೆಲ ಅಹಿತಕರ ಘಟನೆಗಳನ್ನು ಆಧಾರವಾಗಿಟ್ಟಕೊಂಡುಜನ ಮನಸಲ್ಲಿತನ್ನದೇಆದ ಸ್ಥಾನ ಪಡೆದಿರುವಹೋರಿ ಬೆದರಿಸುವಸ್ಪರ್ದೆಗೆ ಹತ್ತಾರು ಕಾನೂನು ತೊಡಕುತಂದಿರವುದುಖಂಡನೀಯಎಂದರು.

ಜಿಲ್ಲಾ ಸಮಿತಿರಚನೆ:ಸ್ವರ್ದೆಆಯೋಜನೆ ಮಾಡಿದವರೆಆಗುವ ಎಲ್ಲ ಅನಾಹುತಗಳಿಗೆ ಹೊಣೆಗಾರರುಎಂದು ಪರವಾನಗಿ ಪಡೆಯುವ ಹೊತ್ತಿಗೆ ಪೊಲೀಸ್ ಇಲಾಕೆ ಕೈಗೆ ನೋಟಿಸ್ ನೀಡುತ್ತದೆ. ಈದುಎಷ್ಟರ ಮಟ್ಟಿಗೆ ಸರಿ.? ವಯಕ್ತಿಕವಾಗಿ ಮಧ್ಯಪಾನ ಮಾಡಿ ಬಂದುಏನಾದರೂಅನಾಹುತವಾದರೆ ಸಮಿತಿ ಏನು ಮಾಡಬೇಕು.?ಜನರ ಬಗ್ಗೆ ಕಾಳಜಿ ಇದ್ದರೆ ಮೊದಲು ಸರ್ಕಾರ ಮದ್ಯಪಾನ ನಿಷೇಧ ಮಾಡಲಿ ಎಂದರಲ್ಲದೇ ಈ ಕುರಿತಂತೆ ಹೋರಿ ಬೆದರಿಸುವಜಿಲ್ಲಾ ಸಮಿತಿರಚನೆ ಮಾಡಿ ಮದ್ಯಪಾನ ನಿಷೇಧ ಹಾಗೂ ಕಸಾಯಿಖಾನೆ ಮುಚ್ಚುವಂತೆ ಹೋರಾಟ ಮಾಡಲಾಗುವುದುಎಂದರು.

ಅಂಕಣದಲ್ಲಿ ಗಾಯಳಾಗಿಲ್ಲ:ಬಸವರಾಜ ಸಂಕಣ್ಣನವರ ಮಾತನಾಡಿ,ಸ್ವರ್ದೆಯಲ್ಲಿಯ ಯಾವುದೇರೀತಿಯಅನಾಹುತಗಳಾಗದಂತೆ ಸಮಿತಿಅತ್ಯಂತಕಟ್ಟುನಿಟ್ಟಿನ ಹಾಗೂ ಅಚ್ಚುಕಟ್ಟಿನ ವ್ಯವಸ್ಥೆ ಮಾಡಿತ್ತು. ಸ್ವರ್ದೆಯಲ್ಲಿಪಾರದರ್ಶಕತೆಯೊಂದಿಗೆಉತ್ತಮಅಂಕಣ ನಿರ್ಮಾಣ ಮಾಡಲಾಗಿತ್ತು.ಇದರಿದಂದಾಗಿ ಈ ವರ್ಷಯಾರೊಬ್ಬರಿಗೂಅಂಕಣದಲ್ಲಿ ಗಾಯಗಳಾಗಿಲ್ಲ ಇಷ್ಟಾಗ್ಯೂತಾಲೂಕಾಸ್ಪತ್ರೆ ಸಿಬ್ಬಂದಿ 28 ಜನರಿಗೆಗಾಯಎಂದು ಹೇಳಿಕೆ ನೀಡಿರುವುದು ವಿಪರ್ಯಾಸದ ಸಂಗತಿಎಂದರು.

ಎಲ್ಲರಿಗೂಧನ್ಯವಾದ:ಸಮಿತಿಅಧ್ಯಕ್ಷಕರಬಸಯ್ಯಕಲ್ಮಠಮಾತನಾಡಿ, ಪ್ರಸಕ್ತ ವರ್ಷದ ಹೋರಿ ಬೆದರಿಸುವ ಸ್ವರ್ದೆಯಾವುದೇಆತಂಕಗಳಿಲ್ಲದೆ ಹಾಗೂ ಅನಾಹುತಗಳಿಲ್ಲದೆ ಶಾಂತಿಯವುತವಾಗಿ ನಡೆದಿದ್ದು ಖುಶಿಯ ವಿಚಾರ. ಸ್ವರ್ದೆಯ ಯಶಸ್ಸಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

ಈ ಸಂದರ್ಬದಲ್ಲಿ ಸಮಿತಿಗೌರವಾಧ್ಯಕ್ಷ ಮಲಕಪ್ಪ ಹಾದರಗೇರಿ, ಮಂಜಣ್ಣ ಬಾರ್ಕಿ, ಹನುಮಂತಪ್ಪ ಮ್ಯಾಗೇರಿ, ಉಮೇಶ ಹಾಲನಗೌಡ್ರ, ಸೇರಿದಂತೆಇನ್ನಿತರರು ಉಪಸ್ಥಿತರಿದ್ದರು.